ಒಲೆಯ ಮೇಲೆ ಬೇಳೆ ಬೇಯೋಕೆ ಅಂತ ಇಟ್ಟಿದ್ದೆ. ಸೀದು ಹೋದಂತಿದೆ. ನೀವು ಹೊಗ್ಬಿಟ್ಟು ಬನ್ನಿ, ಆಮೇಲೆ ಮಾತಾಡೋಣ' ಎನ್ನುತ್ತ ಅವಸರದಲ್ಲಿ ಅಡುಗೆ ಮನೆಯತ್ತ ಧಾವಿಸಿದರು... 'ನೀವೊಬ್ರು!' ಎನ್ನುತ್ತ ರಾಯರು ಹೊರನಡೆದರು.

ಅರ್ಧ ಶತಮಾನದಷ್ಟು ಹಳೆಯದಾದ ಮಹಡಿ ಮನೆ. ಸುತ್ತಲೂ ಆವರಿಸಿರುವ ಇಪ್ಪತ್ತೆರಡು ಸೆಂಟ್ಸ್ ವಿಸ್ತಾರದ ಜಾಗ. ಒಂದು ಹಳೆಯ ಬಾವಿ, ಅಲ್ಲಲ್ಲಿ ಬೆಳೆದ ಮಾವಿನ ಮರಗಳು, ಸೀಬೆ ಗಿಡಗಳು. ನಡುವೆ ಬೆಳೆದ ಕಳೆ, ಕಸಕಡ್ಡಿಗಳ ರಾಶಿ. ನಡುನಡುವೆ ಕಳಚಿಕೊಳ್ಳುತ್ತಿರುವ ಕಾಂಪೌಂಡ್ ಗೋಡೆ, ಗೋಡೆಯ ಸಮೀಪ ತೂನೆವ ಹತ್ತಾರು ತೆಂಗಿನ ಮರಗಳು, ಮನೆಯ ಇಕ್ಕೆಲಗಳಲ್ಲಿ ತಲೆಯೆತ್ತಿ ನಿಂತಿರುವ ಬಹುಮಹಡಿ ಕಟ್ಟಡಗಳು. ಎದುರಿನ ರಸ್ತೆಯಲ್ಲಿ 'ಭರೋ' ಎನ್ನುತ್ತ ವೇಗದಿಂದೋಡುವ ವಾಹನಗಳು. ಮಧ್ಯಾಹ್ನ ಊಟವಾದ ಮೇಲೆ ಹೊತ್ತು ಹೋಗುವುದು ಕಷ್ಟ. ಸಂಜೆ ಸೂರ್ಯ ಕೆಂಪಡರಿ ಪಶ್ಚಿಮಕ್ಕೆ ಜಾರುತ್ತಿರುವಾಗ ಶ್ರೀಕಂಠಯ್ಯ ತಮ್ಮ ತೋಟದಲ್ಲಿ ಸುತ್ತಾಡಿ ಬಿದ್ದ ತೆಂಗಿನ ಹೆಡೆಗಳನ್ನು, ತರಗೆಲೆಗಳನ್ನು, ಕಸಕಡ್ಡಿಗಳನ್ನು ಬದಿಗೆ ಸರಿಸುತ್ತ ಸಾಗುತ್ತಾರೆ. ದಿನ ಬಿಟ್ಟು ದಿನ ಪಂಪ್ ಸೆಟ್ ಆನ್ ಮಾಡಿ ಗಿಡಮರಗಳಿಗೆ ನೀರುಣಿಸುವುದೂ ಇದೆ.

ಕೇವಲ ಹದಿನೈದು ವರ್ಷಗಳಲ್ಲಿ ಅದೆಷ್ಟು ಬದಲಾಗಿದೆ ನನ್ನ ಹಳ್ಳಿ! ಇದೇ ನೆಲದಲ್ಲಿ ತಾನೆ ಹೊಲಗದ್ದೆಗಳು ಪೈರಿನಿಂದ ತುಂಬಿ ಹಸಿರು ಮುರಿಯುತ್ತಿದ್ದುದು? ಇದೇ ನೆಲವಲ್ಲವೇ ತೆಂಗು, ಕಬ್ಬು, ಬಾಳೆ, ಮಾವಿನ ಫಸಲಿನಿಂದ ಸಮೃದ್ಧತೆಯನ್ನು ಸಾರುತ್ತಿದ್ದುದು? ಇದೇ ನೆಲದಲ್ಲಲ್ಲವೇ ಎತ್ತಿನ ಗಾಡಿಗಳು ಕೊರಳ ಘಂಟೆಗಳ ಸದ್ದು ಮಾಡುತ್ತ ತಿರುವಿನಲ್ಲಿ ಹೊರಳಿಕೊಳ್ಳುತ್ತಿದ್ದದ್ದು? ರೈತರು, ಅವರ ಸಂಸಾರ, ಅವರ ಮಕ್ಕಳು ಹಬ್ಬ ಆಚರಿಸುತ್ತಿದ್ದುದು ಇದೇ ನೆಲದಲ್ಲಿ ತಾನೇ? ಎಲ್ಲಿ ಹೋದವೊ ಆ ದಿನಗಳು! ಈಗ? ಸುತ್ತ ತಲೆಯೆತ್ತಿ ಮುಗಿಲು ಮುಟ್ಟಲು ಹವಣಿಸುವ ಗಗನಚುಂಬಿಗಳು. ಆ ಹಳ್ಳಿಯ ಪ್ರಶಾಂತತೆಯನ್ನೇ ನುಂಗಿ ನೊಣೆದು ನಗರ ಮಹಾನಗರವಾಗಿ ಬೆಳೆದು ಗೌಜುಗದ್ದಲದಲ್ಲಿ ಅದ್ದಿ ತೆಗೆದಂತಿದೆ. ನಗರಕ್ಕೆ ಹತ್ತಿರ ಎಂಬುದೇ ಕಾರಣವಾಗಿ ನೋಡನೋಡುತ್ತಿದ್ದಂತೆ ಹಳ್ಳಿಗೆ ಹಳ್ಳಿಯನ್ನೇ ಆಪೋಶನ ಮಾಡಿದ ಅಜಗರವಲ್ಲವೇ ಇದು? ರಿಯಲ್ ಎಸ್ಟೇಟ್ ದಂಧೆ ಮಾಡುವ ತಿಮಿಂಗಲುಗಳ ಬಾಯಿಗೆ ಬಿದ್ದ ರೈತರು ನಾಮಾವಶೇಷವಾಗಿ ಹೋದರಲ್ಲ. ಪಾಪ; ಎಲ್ಲಿ ಹೋದರೊ!

ಮನೆಯ ಛಾವಣಿಯ ಮೇಲೆ ಜೇಡ ಬಲೆ ಕಟ್ಟತ್ತು. ಕೋಲಿನ ತುದಿಗೆ ಕಸಬರಿಗೆ ಕಟ್ಟಿ ಬಲೆ ಝಾಡಿಸಿ ಹಸನುಗೊಳಿಸಬೇಕೆಂದುಕೊಂಡರು ಶ್ರೀಕಂಠಯ್ಯ. ಹೊಸ್ತಿಲ ಬಾಗಿಲ ಮೇಲೆ ಮಡದಿ ಲಕ್ಷ್ಮಿಯ ಫೋಟೊ. ಖುರ್ಚಿಯ ಮೇಲೆ ಸ್ಟೂಲನ್ನಿರಿಸಿ ಮೇಲಕ್ಕೆ ಏರಿ ಫೋಟೊವನ್ನು ಕೆಳಗಿಳಿಸಿ ಬಟ್ಟೆಯಿಂದ ಒರೆಸಿದರು. ಹಣೆಯ ಮೇಲೆ ದೊಡ್ಡ ಕುಂಕುಮ ಬೊಟ್ಟು. ತುಸುವೆ ಕೆಳಗಿಳಿದ ಮೂಗುತಿ. ತುಟಿಗಳಲ್ಲಿ ಲಾಸ್ಯವಾಡುವ ಮುಗುಳ್ನಗು. ನನ್ನ ಪಾಲಿಗೆ ಸಾಕ್ಷಾತ್ ಲಕ್ಷ್ಮಿಯೇ ಆಗಿದ್ದವಳು. ಇಂದಿಗೆ ಎಷ್ಟು ವರ್ಷವಾಯಿತು ಹೋಗಿ? ನನ್ನ ಒಂಟಿಯಾಗಿಸಿ ಯಾಕೆ ಹೋದೆ, ಲಕ್ಷ್ಮಿ?

ಗೋಡೆಯ ಇಕ್ಕೆಲಗಳಲ್ಲಿ ಮಗರಾಯನ ಫೋಟೊಗಳು. ಸ್ಕೂಲಿನ ಯುನಿಫಾರ್ಮಿನಲ್ಲಿ ಒಂದು, ಕ್ರಿಕೆಟ್ ಬ್ಯಾಟ್ ಬೀಸುವ ಪೋಸ್‌ನಲ್ಲಿ ಇನ್ನೊಂದು, ಗೆಳೆಯರೊಡನೆ ಮತ್ತೊಂದು, ಪದವಿ ಪಡೆದ ದಾಖಲೆಯಾಗಿ ಮಗದೊಂದು. ಆಚೆಯ ಗೋಡೆಯ ಮೇಲೆ ಮಗ ಮತ್ತು ಸೊಸೆಯ ವಿವಿಧ ಭಂಗಿಯ ಜೋಡಿಚಿತ್ರಗಳು. ಅಪ್ಪನ ಹಾಜರಾತಿಯಿಲ್ಲದೇ ಮದುವೆಯಾದ